15/10/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಬೆಳಗ್ಗೆ-ಬೆಳಗ್ಗೆ ಎದ್ದು ನೆನಪಿನಲ್ಲಿ ಕುಳಿತುಕೊಳ್ಳುವ ಅಭ್ಯಾಸ ಮಾಡಿ, ಊಟ ಮಾಡುವಾಗಲೂ ಸಹ ಒಬ್ಬರಿಗೊಬ್ಬರು ತಂದೆಯ ನೆನಪನ್ನು ತರಿಸಿಕೊಳ್ಳಬೇಕು, ನೆನಪು ಮಾಡುತ್ತಾ-ಮಾಡುತ್ತಾ ನೀವು ಗೌರವಯುತವಾಗಿ ಪಾಸ್ ಆಗುತ್ತೀರಿ"

ಪ್ರಶ್ನೆ: ಯಾವ ಒಂದು ಕೊರತೆಯ ಕಾರಣ ಮಕ್ಕಳ ರಿಪೋರ್ಟ್ ತಂದೆ ಹತ್ತಿರ ಬರುತ್ತದೆ?

ಉತ್ತರ: ಉತ್ತರ: ಕೆಲವು ಮಕ್ಕಳು ಇದುವರೆವಿಗೂ ಪ್ರೇಮ ಸ್ವರೂಪರಾಗಿಲ್ಲ. ಮುಖದಿಂದ ದುಃಖ ಕೊಡುವ ಮಾತುಗಳನ್ನೇ ಮಾತನಾಡುತ್ತಾರೆ ಆದ್ದರಿಂದ ತಂದೆ ಹತ್ತಿರ ರಿಪೋರ್ಟ್ ಬರುತ್ತದೆ. ಆದ್ದರಿಂದ ಮಕ್ಕಳು ಬಹಳ ಪ್ರೇಮದಿಂದ ನಡೆದುಕೊಳ್ಳಬೇಕು. ಒಂದುವೇಳೆ ಸ್ವಯಂನಲ್ಲಿಯೇ ಅವಗುಣಗಳಿದ್ದರೆ ಅನ್ಯರ ಅವಗುಣಗಳನ್ನು ಹೇಗೆ ತೆಗೆಯುತ್ತೀರಿ, ಆದ್ದರಿಂದ ದೇವತೆಗಳ ಹಾಗೆ ಪ್ರೇಮ ಸ್ವರೂಪರಾಗಿ, ಭೂತಗಳನ್ನು ತೆಗೆದು ಹಾಕಿ.

ಗೀತೆ: ಕೊನೆಗೆ ಆ ದಿನ ಈಗ ಬಂದಿದೆ..

ಓಂ ಶಾಂತಿ. ಮಕಳು ಬಡವರ ಬಂಧು ತಂದೆಯನ್ನು ತಿಳಿದುಕೊಂಡಿದ್ದೀರಿ ಹಾಗೂ ತಂದೆಯ ನೆನಪಿನಲ್ಲಿರುತ್ತೀರಿ. ಭಲೆ ಕಣ್ಣಿಂದ ಏನನ್ನಾದರೂ ನೋಡಲಿ, ಕರ್ಮೇಂದ್ರಿಯಗಳಿಂದ ಕರ್ಮವೂ ಸಹ ಮಾಡಲಿ ಆದರೆ ಕೈಯಿಂದ ಕರ್ಮ ಮಾಡುತ್ತಿರಿ, ಹೃದಯದಿಂದ ಪ್ರಿಯತಮನನ್ನು ನೆನಪು ಮಾಡಿ ಎಂದು ಗಾಯನವಿದೆ. ಅರ್ಧಕಲ್ಪ ನಾವು ತಂದೆಯನ್ನು ನೆನಪು ಮಾಡಿದ್ದೇವೆಂದು ಬ್ರಾಹ್ಮಣ ಕುಲಭೂಷಣರಿಗೆ ಗೊತ್ತಿದೆ, ಅವರ ಜೊತೆಯಲ್ಲೇ ತಂದೆ ಮಾತನಾಡುತ್ತಾರೆ. ಡ್ರಾಮಾನುಸಾರವಾಗಿ ಈಗ ನಿಮಗೆ ಸೃಷ್ಟಿಚಕ್ರ ಹೇಗೆ ಸುತ್ತುತ್ತದೆ ಎಂದು ತಂದೆಯ ಸ್ಮೃತಿ ಬಂದಿದೆ. ಇಡೀ ಪ್ರಪಂಚ ವಿಸ್ಮೃತಿಯಲ್ಲಿ ಇದೆ. ತಂದೆಯ ಹಾಗೂ ತಂದೆಯ ರಚನೆಯ ಬಗ್ಗೆ, ತಂದೆಯು ಪತಿತರಿಂದ ಪಾವನರನ್ನಾಗಿ ಮಾಡುವ ಅಥವಾ ಸರ್ವರಿಗೆ ಸದ್ಗತಿ ಕೊಡುವಂತಹ ಕರ್ತವ್ಯದ ಬಗ್ಗೆ ಯಾರಿಗೂ ಗೊತ್ತಿಲ್ಲ. ನೀವು ರಚಯಿತ ಹಾಗೂ ರಚನೆಯ ಆದಿ-ಮಧ್ಯ-ಅಂತ್ಯವನ್ನು ತಿಳಿದುಕೊಂಡಿದ್ದೀರಿ. ನಿಮಗೆ ಸೃಷ್ಟಿ ಚಕ್ರ ಹೇಗೆ ಸುತ್ತುತ್ತದೆ ಎಂದು ಸ್ಮೃತಿಗೆ ಬಂದಿದೆ, ನಾವು 84 ಜನ್ಮಗಳ ಚಕ್ರವನ್ನು ಹೇಗೆ ಸುತ್ತುತ್ತೇವೆ, ಯಾರು ಸತ್ಯಯುಗದಿಂದ ಹಿಡಿದು ಕಲಿಯುಗ ಕೊನೆಯವರೆವಿಗೂ ಪಾರ್ಟ್ ಮಾಡಿದ್ದಾರೋ ಅವರೇ ಈಗಲೂ ಸಹ ಪಾರ್ಟ್ ಮಾಡುತ್ತಾರೆ. ಸತ್ಯಯುಗದಿಂದ ಹಿಡಿದು ಕಲಿಯುಗದವರೆವಿಗೂ ಜನ್ಮಗಳನ್ನು ಪಡೆಯುತ್ತಾ ಕೆಳಗೆ ಇಳಿಯುತ್ತಾ ಬಂದಿದ್ದೇವೆ. ಈಗ ಕಲಿಯುಗ ಅಂತ್ಯದಲ್ಲಿ ನಿಮ್ಮ ಏರುವಕಲೆ ಆಗುತ್ತದೆ. ಏರುವಕಲೆಯಿಂದ ಎಲ್ಲರ ಕಲ್ಯಾಣವಾಗುತ್ತದೆ ಎಂದು ಹೇಳುತ್ತಾರೆ. ಅಂದಾಗ ನಿಮಗೆ ಎಲ್ಲವೂ ಸ್ಮೃತಿಗೆ ಬಂದಿದೆ, ಇದಕ್ಕೆ ಸ್ಮೃತಿಲಬ್ಧ, ನಷ್ಟಮೋಹ ಎನ್ನುತ್ತಾರೆ. ಯಾರ ಮುಖಾಂತರ ಸ್ಮೃತಿಗೆ ಬಂದಿದೆ? ತಂದೆಯ ಮುಖಾಂತರ. ತಾನಾಗಿಯೇ ಸ್ಮೃತಿಗೆ ಬರಲಿಲ್ಲ. ನಿಮಗೆ ನಾವು ಆತ್ಮರು ಪರಮಪಿತ ಪರಮಾತ್ಮನ ಸಂತಾನರಾಗಿದ್ದೇವೆ ಎಂದು ಗೊತ್ತಿದೆ. ಈ ಶರೀರವಂತೂ ಲೌಕಿಕ ತಂದೆ ಕೊಟ್ಟಿದ್ದಾರೆ. ಈಗ ಹೇಗೆ ಹಾವು ಹಳೆಯ ಪೊರೆಯನ್ನು ಬಿಟ್ಟು ಹೊಸದನ್ನು ಪಡೆದುಕೊಳ್ಳುತ್ತದೋ ಹಾಗೆಯೇ ಈ ಹಳೆಯ ಶರೀರದ ಬಾನವನ್ನು ಬಿಟ್ಟುಬಿಡಿ ಎಂದು ಅಲೌಕಿಕ ತಂದೆ ಹೇಳುತ್ತಾರೆ. ಈ ವಿಷಯ ಸತ್ಯಯುಗದಲ್ಲಿ ಇರುತ್ತದೆ ಅಂದಾಗ ತಾವೂ ಸಹ ಸತ್ಯಯುಗದಿಂದ ಶರೀರವನ್ನು ಬಿಡುವುದು ಪ್ರಾರಂಭಿಸುತ್ತೀರಿ. ಇದು ನಿಮ್ಮ ಕೊನೆಯ ಜನ್ಮವಾಗಿದೆ. ತಂದೆಯು ಹೇಳುತ್ತಾರೆ - ಈಗ ಸ್ವಲ್ಪ ಸಮಯವಿದೆ. ನಿಮಗೆ ಧೈರ್ಯ ಸಿಕ್ಕಿದೆ ತಂದೆಯ ಮೂಲಕ ಸುಖದ ಆಸ್ತಿಯನ್ನು ಪಡೆದುಕೊಳ್ಳುತ್ತೇವೆಂದು ನೀವು ಖುಷಿಯಲ್ಲಿರುತ್ತೀರಿ. ಸುಖದ ಆಸ್ತಿಯಂತೂ ತಂದೆಯ ಮೂಲಕ ಸಿಗುತ್ತದೆಯಲ್ಲವೇ. ಈ ಮಾತು ಯಾರದೇ ಮನುಷ್ಯರ ಬುದ್ಧಿಯಲ್ಲಿ ಬರುವುದಿಲ್ಲ. ಅವರು ಲಕ್ಷ್ಮೀ-ನಾರಾಯಣರ ಮಂದಿರಕ್ಕೆ ಹೋಗುತ್ತಾರೆಂದರೆ ಇವರು ಯಾರಾಗಿದ್ದಾರೆ ಎಂದು ಅವರ ಬುದ್ಧಿಯಲ್ಲಿ ಬರುವುದಿಲ್ಲ. ಇವರಂತೂ ಕೈಗಳನ್ನು ಜೋಡಿಸಿ ನೀವೇ ತಂದೆ-ತಾಯಿ.. ಎಂದು ಹೇಳುತ್ತಾರೆ ಆದರೆ ಶಿವತಂದೆ ಎಲ್ಲರಿಗಿಂತ ಶ್ರೇಷ್ಠರಾಗಿದ್ದಾರೆ. ಶಿವತಂದೆ ತೋಟದಮಾಲಿಯೂ ಸಹ ಆಗಿದ್ದಾರೆ ಏಕೆಂದರೆ ದೈವೀ ತೋಟಕ್ಕೆ ಸಸಿಯನ್ನು ನೀಡುತ್ತಾರೆ. ಸ್ವಯಂ ಮಾಲೀಕನೂ ಆಗಿದ್ದಾರೆ ಹಾಗೂ ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಅಂದಾಗ ಬಾಬಾ ಮಾಲೀಕ, ಭಗವಂತ ಹಾಗೂ ಅಂಬಿಗ ಹೇಗಾಗಿದ್ದಾರೆ ಎಂಬುದು ನೀವಷ್ಟೇ ತಿಳಿದುಕೊಂಡಿದ್ದೀರಿ. ಇದೆಲ್ಲಾ ಅವರ ಅನೇಕ ಹೆಸರುಗಳಾಗಿವೆ, ಅವರಿಗೆ ಮುಕ್ತಿದಾತ ಎಂದೂ ಸಹ ಕರೆಯುತ್ತಾರೆ. ಅವರನ್ನೇ ನೆನಪು ಮಾಡಬೇಕು. ಇಲ್ಲಿಗೆ ಬರುತ್ತೀರೆಂದರೆ ಅವರನ್ನು ನೆನಪು ಮಾಡಿ ಬನ್ನಿ ಎಂದು ತಂದೆಯು ಹೇಳುತ್ತಾರೆ. ನಾವಂತೂ ಶಿವತಂದೆಯನ್ನು ತನ್ನವರನ್ನಾಗಿ ಮಾಡಿಕೊಂಡಿದ್ದೇವೆ. ಬ್ರಹ್ಮಾರವರೂ ಸಹ ಶಿವತಂದೆಯನ್ನು ತನ್ನವರನ್ನಾಗಿ ಮಾಡಿಕೊಂಡಿದ್ದಾರೆ. ಅಂದಾಗ ನಾವು ಅವರನ್ನೇ ಏಕೆ ನೆನಪು ಮಾಡಬಾರದು? ಚಿತ್ರದಲ್ಲೂ ಸಹ ಎಲ್ಲರೂ ಶಿವನನ್ನೇ ಒಪ್ಪಿಕೊಳ್ಳುತ್ತಾರೆಂದು ಇದೆ. ತಂದೆ ಆತ್ಮರ ಜೊತೆಯೇ ಮಾತನಾಡುತ್ತಾರೆ. ಆತ್ಮ ಎನ್ನುವುದರ ಬದಲಾಗಿ ಜೀವಾತ್ಮ ಎನ್ನುವುದು ಸರಿಯಿದೆ ಏಕೆಂದರೆ ಆತ್ಮ ಒಂಟಿಯಾಗಿದ್ದರೆ ಮಾತನಾಡಲು ಸಾಧ್ಯವಿಲ್ಲ. ಶರೀರದ ವಿನಃ ಆತ್ಮ, ಆತ್ಮನ ಜೊತೆ ಮಾತನಾಡುವುದಿಲ್ಲ. ಪರಮಧಾಮದಿಂದ ಪರಮಾತ್ಮ ಆತ್ಮರ ಜೊತೆ ಮಾತನಾಡುತ್ತಾರೇನು? ಪರಮಾತ್ಮನೇ ಕ್ರೈಸ್ತನನ್ನು ಕಳುಹಿಸಿದ್ದಾರೆಂದು ಹೇಳುತ್ತಾರೆ ಆದರೆ ಅಲ್ಲಿ ಪರಮಾತ್ಮ ಮಾತನಾಡುವುದಿಲ್ಲ, ಅಲ್ಲಿ ಸಂಜ್ಞೆಯೂ ಸಹ ಇರುವುದಿಲ್ಲ.

ಡ್ರಾಮಾನುಸಾರವಾಗಿ ಆತ್ಮನೇ ಪಾರ್ಟ್ ಮಾಡುವ ಸಲುವಾಗಿ ತಾನಾಗಿಯೇ ಕೆಳಗೆ ಬಂದುಬಿಡುತ್ತದೆ. ಆತ್ಮನಲ್ಲಿ ಪಾರ್ಟ್ ತುಂಬಿದೆ. ಆತ್ಮ ಕೆಳಗೆ ಬಂದು ಶರೀರವನ್ನು ಧಾರಣೆ ಮಾಡಿ ಪಾರ್ಟ್ ಮಾಡುತ್ತದೆ. ಶರೀರದ ಹೆಸರಂತೂ ಎಲ್ಲರದೂ ಬೇರೆ ಆಗಿರುತ್ತದೆ. ಆತ್ಮನ ಹೆಸರು ಆತ್ಮನೇ ಆಗಿದೆ. ನಾವು ಆತ್ಮರು ಒಂದು ಶರೀರವನ್ನು ಬಿಟ್ಟು ಬೇರೆ ಶರೀರವನ್ನು ಧಾರಣೆ ಮಾಡುತ್ತೇವೆ. ಈಗ ಯಾವುದೂ ನೆನಪಿಗೆ ಬರಬಾರದು ಏಕೆಂದರೆ ಹಳೆಯ ಪ್ರಪಂಚದಲ್ಲಿ ಹಳೆಯ ಪಾರ್ಟ್, ಹಳೆಯ ಶರೀರವನ್ನು ಬಿಟ್ಟು ಹೊಸ ಪ್ರಪಂಚಕ್ಕೆ ಹೋಗುತ್ತೇವೆ ಎಂದು ಸ್ಮೃತಿಗೆ ಬಂದಿದೆ. ಅಲ್ಲಿ ನಮಗೆ ಹೊಸ ಶರೀರ ಸಿಗುತ್ತದೆ. 5 ವಿಕಾರಗಳನ್ನು ಬಿಡುವುದೇ ಇದರ ಅರ್ಥವಾಗಿದೆ, ಅಂದಾಗ ಎಷ್ಟು ಕಷ್ಟವಾಗುತ್ತದೆ.

ನೋಡಿ, ಮಕ್ಕಳು ಕಾಮ, ಕ್ರೋಧದ ಬಿರುಗಾಳಿ ಬರುತ್ತದೆ ಎಂದು ಬರೆಯುತ್ತಾರೆ. ಅಂದಾಗ ತಂದೆಯು ಮಕ್ಕಳೇ ದಾನ ಮಾಡಿದ್ದೇ ಆದರೆ ಗ್ರಹಣ ಬಿಟ್ಟು ಹೋಗುತ್ತದೆ ಎಂದು ಹೇಳುತ್ತಾರೆ. ಹೇಗೆ ಚಂದ್ರಮನೂ ಸಹ ಪೌರ್ಣಮಿ ನಂತರ ನಿಧಾನ-ನಿಧಾನಕ್ಕೆ ಕಲೆ ಕಡಿಮೆಯಾಗುತ್ತದೆ ಹಾಗೆಯೇ ಮೊದಲು ನಾವು 16 ಕಲಾ ಸಂಪೂರ್ಣರಾಗಿದ್ದೇವೆ, ಈಗ ಯಾವುದೇ ಕಲೆ ಇಲ್ಲ. ಕೊನೆಯಲ್ಲಿ ಚಂದ್ರಮನಿಗೆ ಸಣ್ಣ ಗೆರೆ ಉಳಿದಿರುತ್ತದೆ, ಹಾಗೆಯೇ ನಿಮ್ಮ ಅವಸ್ಥೆಯೂ ಇದೆ. ದಾನ ಕೊಟ್ಟಿದ್ದೇ ಆದರೆ ಗ್ರಹಣ ಬಿಟ್ಟು ಹೋಗುತ್ತದೆ ಎಂದು ತಂದೆಯು ಹೇಳುತ್ತಾರೆ. ಒಂದುವೇಳೆ ವಿಕಾರಗಳ ದಾನವನ್ನು ಕೊಟ್ಟು ಪುನಃ ಪಡೆದುಕೊಂಡರೆ ಶ್ರೇಷ್ಠ ಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಇಲ್ಲಿ ವಿಕಾರದ ಮಾತೇ ಇಲ್ಲ. ಹಣದ ಮಾತೇ ಇಲ್ಲ. ಹರಿಶ್ಚಂದ್ರನ ಹಾಗೆ ಧನವನ್ನು ದಾನ ಮಾಡಿ ವಾಪಸ್ ತೆಗೆದುಕೊಳ್ಳಬಾರದು. ವಾಸ್ತವಿಕವಾಗಿ ಇದು ವಿಕಾರದ ಮಾತಾಗಿದೆ. ವಿಕಾರವನ್ನು ದಾನ ಮಾಡಿ ವಾಪಸ್ ತೆಗೆದುಕೊಳ್ಳಬಾರದು. ಯಾರಿಂದ ನನ್ನ ಜನ್ಮ-ಜನ್ಮಾಂತರದ ಗ್ರಹಣ ಬಿಟ್ಟಿದೆ ಅಂತಹ ತಂದೆಯ ಜೊತೆ ನನ್ನ ಹೃದಯ ಇದೆಯೇ? ಎಂದು ಆಂತರಿಕಹೃದಯದಿಂದ ನೋಡಿಕೊಳ್ಳಿ. ಸಮಯ ಅಂತೂ ಹಿಡಿಯುತ್ತದೆ. ಒಮ್ಮೆಯೇ ಬಿಡುವುದಿಲ್ಲ. ಏನೆಲ್ಲಾ ಕರ್ಮಭೋಗ ಉಳಿದಿದೆಯೋ ಅದರ ಚಿಹ್ನೆ ಕಾಯಿಲೆಯಾಗಿದೆ. ಪೂರ್ತಿ ಯೋಗ ಇಲ್ಲದೆ ಇರುವುದು ಬಿರುಗಾಳಿ ಬರಲು ಕಾರಣವಾಗಿದೆ. ಎಲ್ಲಾ ಸಂಗವನ್ನು ಬಿಟ್ಟು ನನ್ನ ಸಂಗ ಜೋಡಿಸಿ ಎಂದು ತಂದೆಯು ಹೇಳುತ್ತಾರೆ. ಬೇರೆ ಸತ್ಸಂಗದಲ್ಲಿ ಪ್ರಿಯತಮನ ಕುರಿತು ತಿಳಿದಿಲ್ಲ. ಆತ್ಮನಲ್ಲಿ 84 ಜನ್ಮಗಳ ಅವಿನಾಶಿ ಪಾರ್ಟ್ ಫಿಕ್ಸ್ ಆಗಿದೆ ಎಂದೂ ಸಹ ತಿಳಿದಿಲ್ಲ. ಮೊದಲು ನಮ್ಮ ಬುದ್ಧಿಯಲ್ಲೂ ಇರಲಿಲ್ಲ ಅಂದಾಗ ಬೇರೆಯವರ ಬುದ್ಧಿಯಲ್ಲಿ ಹೇಗಿರುತ್ತದೆ! ನಾವು ಯಾರು ದೇವತಾ ಕುಲದವರಾಗಿದ್ದೆವು, ಅವರೂ ಸಹ ತಿಳಿದಿರಲಿಲ್ಲ. ನಾವು ಬ್ರಾಹ್ಮಣರಾಗಿದ್ದೇವೆ ಮತ್ತು ಸತ್ಯಯುಗದಲ್ಲಿ ಪ್ರಾಲಬ್ಧ ಪ್ರಾರಂಭವಾಗುತ್ತದೆ ಹಾಗೂ ಪ್ರತಿಯೊಬ್ಬರು ಯಾವ ಕರ್ಮ ಸತ್ಯಯುಗದಲ್ಲಿ ಮಾಡಿದ್ದರೋ ಅದೇ ಪುನರಾವರ್ತನೆ ಆಗುತ್ತದೆ. ಸಂಸ್ಕಾರ ಇಮರ್ಜ್ ಆಗುತ್ತಾ ಹೋಗುತ್ತದೆ. ತಂದೆಗೆ ಪ್ರೇಮಸಾಗರ, ಜ್ಞಾನಸಾಗರ ಎಂದು ಮಹಿಮೆ ಮಾಡುತ್ತಾರೆಂದಾಗ ನಾವೂ ಸಹ ಪ್ರೀತಿಯನ್ನು ಕಲಿಯುತ್ತಿದ್ದೇವೆ. ಯಾರಿಗಾದರು ದುಃಖ ಕೊಡುವ ಮಾತುಗಳು ನಮ್ಮ ಮುಖದಿಂದ ಬರಬಾರದು. ಒಂದುವೇಳೆ ಯಾರಿಗಾದರೂ ದುಃಖ ಕೊಟ್ಟಿದ್ದೇ ಆದರೆ ನನ್ನ ಒಳಗೆ ಭೂತ ಇದೆ, ನಾನು ಲಕ್ಷ್ಮಿಯನ್ನು ವರಿಸಲು ಸಾಧ್ಯವಿಲ್ಲ ಎಂದು ತಿಳಿದುಕೊಳ್ಳಬೇಕು. ತಂದೆಯವರಾಗಿದ್ದೀರೆಂದರೆ ಲಕ್ಷ್ಮಿಯನ್ನು ವರಿಸಲು ಲಾಯಕ್ ಆಗಬೇಕಾಗಿದೆ. ಒಂದುವೇಳೆ ಯಾವುದಾದರೂ ಭೂತ ಉಳಿದುಕೊಂಡರೆ ತ್ರೇತಾದಲ್ಲಿ ಹೊರಟುಹೋಗುತ್ತೀರಿ. ಮಕ್ಕಳಲ್ಲಿ ಕ್ರೋಧ ಇರಬಾರದು. ಬಹಳ ಪ್ರೀತಿಯಿಂದ ನಡೆದುಕೊಳ್ಳಬೇಕು. ನೋಡಿ ತಂದೆಗೆ ಎಷ್ಟು ಜನ ಮಕ್ಕಳಿದ್ದಾರೆ, ಆದರೂ ತಂದೆ ಕ್ರೋಧ ಮಾಡಿಕೊಳ್ಳುತ್ತಾರೇನು. ಅಂದಾಗ ಈಗ ಕೆಲವು ಮಕ್ಕಳು ಪ್ರೇಮ ಸ್ವರೂಪರಾಗಿಲ್ಲ. ಆಗಾಗ ತಂದೆಯ ಹತ್ತಿರ ರಿಪೋರ್ಟ್ ಬರುತ್ತದೆ ಅಂದರೆ ಇವರಲ್ಲಿ ಭೂತ ಇದೆ ಎಂದು ತಿಳಿದುಕೊಳ್ಳಬೇಕು, ಯಾರಲ್ಲಿ ಭೂತ ಇದೆಯೋ ಅವರು ಅನ್ಯರ ಭೂತಗಳನ್ನು ಹೇಗೆ ತೆಗೆದುಹಾಕುತ್ತಾರೆ. ಬಹಳ ಪ್ರೇಮ ಸ್ವರೂಪರಾಗಬೇಕು ಮತ್ತೆ ಇಲ್ಲಿಯೇ ಆಗಬೇಕು. ದೇವತಾ ಪ್ರೇಮ ಸ್ವರೂಪವಲ್ಲವೇ. ನೋಡಿ, ಲಕ್ಷ್ಮೀ-ನಾರಾಯಣ ಚಿತ್ರ ಎಷ್ಟು ಆಕರ್ಷಣೆ ಮಾಡುತ್ತದೆ, ನಾವೂ ಸಹ ಆ ರೀತಿ ಆಗಬೇಕು. ಪತಿ ಕ್ರೋಧ ಮಾಡಿಕೊಂಡರೂ ನೀವು ಪ್ರೀತಿಯಿಂದ ಮಾತನಾಡಬೇಕು, ಅವರಲ್ಲಿ ಭೂತ ಇದೆ ಅಂದರೆ ನನ್ನಲ್ಲೂ ಭೂತ ಬರಲಿ ಎನ್ನುವ ರೀತಿ ಇರಬಾರದು. ನನ್ನಲ್ಲಿ ಅವಗುಣ ಇದ್ದರೆ, ಏನಾದರೂ ಮಾಡಿ ಅವಗುಣವನ್ನು ತೆಗೆದುಹಾಕಬೇಕು. ಬಹಳ-ಬಹಳ ಮಧುರರಾಗಬೇಕು. ಲೌಕಿಕ ತಂದೆ ಸಿಟ್ಟು ಮಾಡಿಕೊಳ್ಳುತ್ತಾರೆಂದು ಯಾರೋ ಹೇಳಿದಾಗ ನಾನು ಅವರು ಕ್ರೋಧ ಮಾಡಿಕೊಂಡರೆ ಒಳ್ಳೊಳ್ಳೆ ಹೂಗಳನ್ನು ಹಾಕಿ ಎಂದು ಹೇಳಿದೆನು. ಆಗ ಅವರಿಗೆ ಆಶ್ಚರ್ಯವಾಗಬೇಕು, ಶಾಂತ ಆಗಿಬಿಡಬೇಕು. ಬಹಳ ಯುಕ್ತಿಯಿಂದ ತಿಳಿಸಬೇಕು ಏಕೆಂದರೆ ರಾವಣರಾಜ್ಯವಲ್ಲವೇ. ನಾವು ರಾಮನ ಸಂಪ್ರದಾಯದವರು. ಸ್ವಯಂ ಪರಿವರ್ತನೆ ಆಗಲಿಲ್ಲವೆಂದರೆ ಬೇರೆಯವರನ್ನು ಹೇಗೆ ಮಾಡುತ್ತೀರಿ ಆದ್ದರಿಂದ ಸ್ಥಾಪನಾ ಕಾರ್ಯ ತಡವಾಗುತ್ತಿದೆ. ಪ್ರೀತಿಯಿಂದ ವ್ಯವಹರಿಸಬೇಕು, ತಂದೆಯ ಸ್ಮೃತಿ ಇರಬೇಕು ಹಾಗೂ ಸ್ವದರ್ಶನಚಕ್ರಧಾರಿ ಆಗಬೇಕು. ವ್ಯಾಪಾರವಂತೂ ಮಾಡಲೇಬೇಕು ಅದಕ್ಕೆ ಬೆಳಗಿನ ಸಮಯ ಬಹಳ ಚೆನ್ನಾಗಿರುತ್ತದೆ. ಬೇಗ ಮಲಗಿ ಬೇಗ ಎದ್ದೋಳಿ ಎಂದು ಹೇಳುತ್ತಾರೆ, ಆದ್ದರಿಂದ ಬೆಳಗ್ಗೆ ಎದ್ದು ಇಲ್ಲಿಗೆ ಬಂದು ಕುಳಿತುಕೊಂಡರೆ 5 ನಿಮಿಷಗಳಾದರೂ ನೆನಪಿರುತ್ತದೆ. ಮತ್ತೆ ನಿಧ-ನಿಧಾನಕ್ಕೆ ಅಭ್ಯಾಸ ಆಗಿಬಿಟ್ಟರೆ ನೆನಪು ಪಕ್ಕಾ ಆಗಿಬಿಡುತ್ತದೆ. ಒಳ್ಳೆಯದು ಊಟ ಮಾಡುವ ಸಮಯದಲ್ಲಿ ನಾನು ಎಷ್ಟು ತಂದೆಯ ನೆನಪಿನಲ್ಲಿ ಊಟ ಮಾಡಿದೆ ಎಂದು ನೋಡಿಕೊಳ್ಳಿ. ಒಂದುವೇಳೆ ಪೂರ್ತಿ ಸಮಯ ನೆನಪಿನಲ್ಲಿ ಇದ್ದರೆ ಅದೂ ಸಹ ದೊಡ್ಡಕಾರ್ಯವಾಗಿದೆ. ಉಳಿದ ಸಮಯದಲ್ಲಿ ಒಬ್ಬರಿಗೊಬ್ಬರು ತಂದೆಯ ನೆನಪಿದೆಯೇ ಎಂದು ಕೇಳಿಕೊಳ್ಳಬೇಕು. ಒಂದೊಂದು ತುತ್ತಿಗೂ ನೆನಪು ಮಾಡಬೇಕು. ನಮ್ಮದು ಸಹಜ ರಾಜಯೋಗವಾಗಿದೆ. ಪರಮಪಿತ ಪರಮಾತ್ಮ ಸರ್ವಶಕ್ತಿವಂತ ಅಂದಾಗ ಅವರಲ್ಲಿ ಯಾವ ಶಕ್ತಿ ಇದೆ ಎಂದು ಬುದ್ಧಿಯಲ್ಲಿ ಜ್ಞಾನ ಬಂದಿದೆ. ಬಾಂಬ್ಸ್ ಮಾಡುವ ಶಕ್ತಿ

ಇದೆ ಎಂದಲ್ಲ. ಅವರನ್ನು ನೆನಪು ಮಾಡಿದ್ದೇ ಆದರೆ ವಿಕರ್ಮ ವಿನಾಶವಾಗುತ್ತದೆ. ಇದೂ ಶಕ್ತಿಯಾಗಿದೆಯಲ್ಲವೇ. ನೋಡಿ ಎಷ್ಟು ಮುಗ್ಧರಾಗಿದ್ದಾರೆ ಹಾಗೂ ಎಷ್ಟು ಶಕ್ತಿ ಇದೆ. ಯಥಾರ್ಥ ರೀತಿಯಲ್ಲಿ ನೆನಪು ಮಾಡುವುದು ಕಷ್ಟವಲ್ಲವೇ? ಅಂದಾಗ ಪರಿಶ್ರಮ ಪಡಬೇಕು. ಬೆಳಗಿನ ಸಮಯ ಒಳ್ಳೆಯದು. ಭಕ್ತಿಯಲ್ಲೂ ಬೆಳಗ್ಗೆ ಏಳುತ್ತಾರೆ, ಜ್ಞಾನಮಾರ್ಗದಲ್ಲೂ ಸಹ ಬೆಳಗಿನ ಸಮಯ ಬಹಳ ಒಳ್ಳೆಯದು. ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ನಾನು ಕಲ್ಪದಲ್ಲಿ ಒಮ್ಮೆ ಬರುತ್ತೇನೆ ಅಂದಾಗ ನೀವು ಖುಷಿ-ಖುಷಿಯಿಂದ ಹೋಗಬೇಕು. ದುಃಖಧಾಮದಿಂದ ಹೊರಬರಬೇಕು. ಈ ಸ್ಮೃತಿ ಇದ್ದಿದ್ದೇ ಆದರೆ ಹೆದರಿಕೊಳ್ಳುವುದಿಲ್ಲ. ಎಷ್ಟೇ ಪರೀಕ್ಷೆಗಳು ಬಂದರೂ ಸಹ ಸ್ಮೃತಿ ಪಕ್ಕಾ ಆಗಿರಬೇಕು. ಅಂತಹ ಅವಸ್ಥೆಯನ್ನು ಜಮಾ ಮಾಡಿಕೊಳ್ಳಬೇಕು. ಈಗ ನೀವು ಮಕ್ಕಳಿಗೆ ನಾವೇ ಅದು, ಅದೇ ನಾವು ಎನ್ನುವ ಅರ್ಥವನ್ನೂ ಸಹ ತಿಳಿಸಲಾಗಿದೆ. ನಾನೇ ಪರಮಾತ್ಮನಲ್ಲ, ನಾನು ಪರಮಾತ್ಮನ ಮಗು ಆಗಿದ್ದೇನೆ. ನಾವೇ ಅದು ಎನ್ನುವ ಚಕ್ರದ ದರ್ಶನವಾಗಿದೆ. ಈ ನೆನಪಿನಿಂದಲೇ ತುಕ್ಕು ಬಿಟ್ಟುಹೋಗುತ್ತದೆ. ತುಕ್ಕು ತೆಗೆದುಹಾಕುವ ಸಮಯ ಅಮೃತವೇಳೆಯಾಗಿದೆ. ಗೌರವನೀಯವಾಗಿ ಉತ್ತೀರ್ಣರಾಗಬೇಕೆಂದರೆ ಕೃಷ್ಣಪುರಿಗೆ ಮಾಲೀಕರನ್ನಾಗಿ ಮಾಡುವ ತಂದೆಯನ್ನು ನೆನಪು ಮಾಡಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವ್ಯಾಪಾರ-ವ್ಯವಹಾರ ಮಾಡುತ್ತಿದ್ದರೂ ಸಹ ಸ್ವದರ್ಶನಚಕ್ರಧಾರಿಯಾಗಿರಬೇಕು. ಓಬ್ಬರಿಗೊಬ್ಬರು ತಂದೆಯ ನೆನಪನ್ನು ತರಿಸಬೇಕು. ಎಷ್ಟೇ ಪರೀಕ್ಷೆಗಳು ಬಂದರೂ ಸಹ ಅವಶ್ಯವಾಗಿ ನೆನಪು ಮಾಡಬೇಕು.

2. ವಿಕಾರಗಳ ದಾನ ಮಾಡಿ ಮತ್ತೆ ವಾಪಸ್ ತೆಗೆದುಕೊಳ್ಳಬಾರದು. ಯಾರಿಗೂ ದುಃಖವನ್ನು ಕೊಡಬಾರದು. ಕ್ರೋಧವನ್ನು ಮಾಡಿಕೊಳ್ಳಬಾರದು. ಒಳಗಡೆ ಯಾವ ಭೂತ ಇದೆಯೋ ಅದನ್ನು ತೆಗೆದುಹಾಕಬೇಕು.

ವರದಾನ: ಮಾಲೀಕತನ ದ ಸ್ಮೃತಿಯ ಮುಖಾಂತರ ಪರವಶ ಸ್ಥಿತಿಯನ್ನು ಸಮಾಪ್ತಿ ಮಾಡುವಂತಹ ಸದಾ ಸಮರ್ಥ ಭವ

ಯಾರು ಸದಾ ಮಾಲೀಕತನದ ಸ್ಮೃತಿಯಲ್ಲಿ ಸ್ಥಿತರಾಗಿರುತ್ತಾರೆ-ಅವರ ಸಂಕಲ್ಪ ಆರ್ಡರ್ ಪ್ರಮಾಣ ನಡೆಯುತ್ತಿರುತ್ತದೆ. ಮನಸ್ಸು ಮಾಲೀಕರನ್ನು ಪರವಶ ಮಾಡಲು ಸಾಧ್ಯವಿಲ್ಲ. ಬ್ರಾಹ್ಮಣ ಆತ್ಮ ಎಂದೂ ತನ್ನ ಬಲಹೀನ ಸ್ವಭಾವ-ಸಂಸ್ಕಾರಕ್ಕೆ ವಶರಾಗಲು ಸಾಧ್ಯವಿಲ್ಲ. ಯಾವಾಗ ಸ್ವಭಾವ ಶಬ್ಧ ಎದುರಿಗೆ ಬಂದಾಗ ಸ್ವಭಾವ ಅರ್ಥಾತ್ ಸ್ವಯಂ ನ ಪ್ರತಿ ಅಥವಾ ಸರ್ವರ ಪ್ರತಿ ಆತ್ಮೀಕ ಭಾವ, ಈ ಶ್ರೇಷ್ಠ ಅರ್ಥದಲ್ಲಿ ಸ್ಥಿತರಾಗಿಬಿಡಿ ಮತ್ತು ಯಾವಾಗ ಸಂಸ್ಕಾರವೆಂಬ ಶಬ್ಧ ಬಂದಲ್ಲಿ ತನ್ನ ಅನಾದಿ ಮತ್ತು ಆದಿ ಸಂಸ್ಕಾರಗಳನ್ನು ಸ್ಮೃತಿಯಲ್ಲಿ ತಂದುಕೊಳ್ಳಿ ಆಗ ಸಮರ್ಥರಾಗಿಬಿಡುವಿರಿ. ಪರವಶ ಸ್ಥಿತಿ ಸಮಾಪ್ತಿಯಾಗಿಬಿಡುವುದು.

ಸ್ಲೋಗನ್: ವರದಾನಗಳ ಶಕ್ತಿ ಜಮಾಮಾಡಿಕೊಂಡಾಗ ಪರಿಸ್ಥಿತಿ ರೂಪಿ ಬೆಂಕಿಯೂ ಸಹ ನೀರಾಗಿಬಿಡುವುದು.